# ಆತ್ಮಿಕ ಭಾಗ
# ಡಿಎಎಮ್, ಅಕ್ತ್ರಾ ನವೆಂಬರ್ 2024

ಪ್ರಿಯ ಜಿಲ್ಲಾ ಅಪೊಸ್ತಲರೇ ಹಾಗು ಜಿಲ್ಲಾ ಅಪೊಸ್ತಲರ ಸಹಾಯಕರೇ,

ಕಳೆದ ಹಲವಾರು ವಾರಗಳಿಂದ, "ನ್ಯೂ ಅಪೊಸ್ತಾಲಿಕ್ ಚರ್ಚಿನ ಲಿಟರ್ಜಿ" ಮತ್ತು "ಸೇವಕರಿಗಾಗಿ ಮಾರ್ಗದರ್ಶಕ", "nak.org" ಎಂದಿರುವ ನಮ್ಮ ಚರ್ಚಿನ ವೆಬ್‌ಸೈಟ್‌ನಲ್ಲಿ ಲಭ್ಯವಾಗಿರುವವು. ನಾವು ಈ ಕ್ರಮವನ್ನು ತೆಗೆದುಕೊಂಡಿರುವ ಕಾರಣವೇನೆಂದರೆ, ಇದು, ನಮ್ಮ ಚರ್ಚಿನ ಐಕ್ಯತೆಯನ್ನು ಬಲಪಡಿಸುವುದರಲ್ಲಿ ಸಹಾಯಮಾಡುವುದೆಂದು ನಾವು ದೃಢನಿಶ್ಚಯವುಳ್ಳವರಾಗಿದ್ದೇವೆ. ನಮ್ಮ ಚರ್ಚ್ ಸ್ಪಷ್ಟ ಹಾಗು ನಿಖರವಾದ ನಿಯಮಗಳನ್ನೂ, ಜೊತೆಗೆ ಉತ್ತಮವಾಗಿ ವ್ಯಾಖ್ಯಾನಿಸಲಾದ ಲಿಟರ್ಜಿಯನ್ನೂ ಹೊಂದಿರುವುದೆಂದು ಜನರಿಗೆ ತೋರಿಸುವ ಉದ್ದೇಶವೂ ಇದು ಹೊಂದಿರುತ್ತದೆ. ಮತ್ತು ಈ ಮೂಲಕ ಚರ್ಚಿನ ಒಂದು ಸಕರಾತ್ಮಕವಾದ ಚಿತ್ರವನ್ನು ನಿರ್ಮಿಸಲು ನಾವು ಬಯಸುತ್ತೇವೆ. ನಮ್ಮ ಸದಸ್ಯರ ಪ್ರಾರಂಭಿಕ ಪ್ರತಿಕ್ರಿಯೆಗಳು ಬಹಳಷ್ಟು ಸಕರಾತ್ಮಕವಾಗಿರುವವು. ಇದು ವಿಶೇಷವಾಗಿ ಆಫ್ರಿಕಾದಲ್ಲಿ ನಿಜವಾಗಿದೆ – ಇಂಟರ್‌ನೆಟ್‌ನ ವ್ಯಾಪಕ ಬಳಕೆಯ ಕಾರಣದಿಂದ – ನಮ್ಮ ಸದಸ್ಯರಲ್ಲಿ ಅನೇಕರು ಮೊದಲು ತಮಗೆ ಲಭ್ಯವಿರದಂಥ ಮಾಹಿತಿ ಹಾಗು ದಾಖಲೆಗಳನ್ನು ಈಗ ಹೊಂದಬಹುದು.

"ನ್ಯೂ ಅಪೊಸ್ತಾಲಿಕ್ ಚರ್ಚಿನ ಲಿಟರ್ಜಿ"ಯ ಪ್ರಕಾಶನವು ನಿಮ್ಮೊಂದಿಗೆ ಅಂತ್ಯಾಶೀರ್ವಾದದ ಕುರಿತು ಚರ್ಚಿಸಲು ಅವಕಾಶ ನೀಡುತ್ತದೆ. ಲಿಟರ್ಜಿಯ ಈ ಅಂಶದ ಪ್ರಾಮುಖತೆಯು ಎಂದಿಗೂ ಸರಿಯಾಗಿ ಅರ್ಥಮಾಡಿಕೊಳ್ಳಲಾಗಿಲ್ಲವೆಂಬ ಅನಿಸಿಕೆ ನನಗಿದೆ.

ಅಂತ್ಯಾಶೀರ್ವಾದವು 2 ಕೊರಿಂಥ 13: 14ರಲ್ಲಿರುವ ಮಾತುಗಳಿಂದ ಸಭೆಗೆ ಘೋಷಿಸಲಾಗುವುದು:

*"ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯೂ ದೇವರ ಪ್ರೀತಿಯೂ*
*ಮತ್ತು ಪವಿತ್ರಾತ್ಮನ ಅನ್ಯೋನ್ಯತೆಯೂ ನಿಮ್ಮೊಂದಿಗಿರಲಿ!"*

ಈ ಪದಗಳ ಅರ್ಥ ಮತ್ತು ವ್ಯಾಪ್ತಿ ಏನು?

**ಒಂದು ಸೂತ್ರಕ್ಕಿಂತಲೂ ಹೆಚ್ಚಿನದು – ಒಂದು ಆಶೀರ್ವಾದ!**

ಕಾರ್ಯಕರ್ತನು ಆರಾಧನೆಯ ಅಂತ್ಯವನ್ನು ಸೂಚಿಸಲು ಈ ಪದಗಳನ್ನು ಉಚ್ಚರಿಸುತ್ತಾನೆ. ಈ ವಚನದ ಮಾತುಗಳು ಒಂದು ಆಶೆಯನ್ನು ಸೂಚಿಸುತ್ತವೆ. ಸರಳವಾಗಿ, ಕಾರ್ಯಕರ್ತನು ಯಾವ ಪ್ರಕಾರ ವಿಶ್ವಾಸಿಗಳು ಸುರಕ್ಷಿತವಾಗಿ ಮನೆ ಸೇರಬೇಕೆಂದು ಇಚ್ಛಿಸುವನೋ, ಅದೇ ಪ್ರಕಾರ ಕೃಪೆ, ಪ್ರೀತಿ ಹಾಗು ಅನ್ಯೋನ್ಯತೆಯು ಜೊತೆಗೂಡಬೇಕೆಂದು ಹಾರೈಸುತ್ತಿರುವನೆಂದು ಒಬ್ಬನು ತಿಳಿದುಕೊಳ್ಳಬಹುದು. ವಾಸ್ತವದಲ್ಲಿ, ಇದು ಅದಕ್ಕಿಂತಲೂ ಹೆಚ್ಚಿನದಾಗಿದೆ. ಈ ಉದ್ದೇಶಕ್ಕಾಗಿ ದೇವರಿಂದ ಅಧಿಕಾರ ಕೊಡಲ್ಪಟ್ಟ ಒಬ್ಬ ಸೇವಕನು ಉಚ್ಚರಿಸುವಾಗ, ಈ ಮಾತುಗಳು ನಿಜವಾದ ಆಶೀರ್ವಾದ ಹೊಂದಿರುತ್ತವೆ. ಅವು ದೈವಿಕ ಶಕ್ತಿಯಿಂದ ಕೂಡಿರುತ್ತವೆ ಮತ್ತು ಆಲಿಸುವವರಿಗೆ ಅವು ಆತ್ಮಿಕ ಲಾಭವನ್ನು ಉಂಟು ಮಾಡುತ್ತವೆ.

ಈ ಆಶೀರ್ವಾದದಲ್ಲಿ, ಆಲಿಸುವವರಿಗೆ ಆತನ ಕೃಪೆ, ಪ್ರೀತಿ ಹಾಗು ಅನ್ಯೋನ್ಯತೆಯು ಅವರ ದೈನಂದಿನ ಜೀವಿತಗಳಲ್ಲಿ ಅವರನ್ನು ಜೊತೆಗೂಡಿರುವವೆಂದು ದೇವರು ವಾಗ್ದಾನಿಸುತ್ತಾನೆ. ಮತ್ತು ದೇವರು ತಾನು ಹೇಳುವುದೆಲ್ಲವನ್ನೂ ಮಾಡುವವನಾಗಿರುವ ಕಾರಣ, ತಮ್ಮ ವಿಷಯದಲ್ಲೂ ಇದು ನಿಜವಾಗುವುದೆಂದು ಸಭೆಯು ಖಚಿತತೆಯನ್ನು ಹೊಂದಿರುತ್ತದೆ. ಇದನ್ನು ಕೇಳಿಸಿಕೊಳ್ಳುವ ಪ್ರತಿಯೊಬ್ಬರಿಗೂ ಈ ವಾಗ್ದಾನವು ನೀಡಲಾಗಿದೆ. ಆದರೆ, ಪ್ರತಿಯೊಂದು ಆಶೀರ್ವಾದದಂತೆ, ಇದರ ಪರಿಣಾಮವು ಇದನ್ನು ಪಡೆದುಕೊಳ್ಳುವವರ ನಂಬಿಕೆ ಹಾಗು ನಡತೆಯ ಮೇಲೆ ಆಧಾರಗೊಂಡಿರುತ್ತದೆ.

ಆದ್ದರಿಂದ, ಅಂತ್ಯಾಶೀರ್ವಾದವು ದೇವರಿಂದ ಬರುವಂಥ ವಾಗ್ದಾನವೂ ಮತ್ತು ಎಚ್ಚರಿಕೆಯೂ ಆಗಿದೆ.

**ತ್ರಯೈಕತ್ವದ ಆಶೀರ್ವಾದ**

2 ಕೊರಿಂಥ 13: 14ರಲ್ಲಿನ ವಾಕ್ಯಭಾಗವು ತ್ರಯೈಕತ್ವದ ಕುರಿತು ಸ್ಪಷ್ಟವಾಗಿ ಉಲ್ಲೇಖಿಸುತ್ತದೆ. ದೇವರು ಏಕೈಕನೂ (ಒಬ್ಬನು) ತ್ರಯೈಕನೂ ಆಗಿದ್ದಾನೆಂಬುದನ್ನು ನಾವು ಇಲ್ಲಿ ಜ್ಞಾಪಿಸಿಕೊಳ್ಳೋಣ. ದೈವಿಕ ವ್ಯಕ್ತಿಗಳಲ್ಲಿ ಪ್ರತಿಯೊಬ್ಬನೂ – ತಂದೆಯೂ, ಮಗನೂ ಮತ್ತು ಪವಿತ್ರಾತ್ಮನೂ – ದೇವರಾಗಿದ್ದಾನೆ. ಈ ದೈವಿಕ ವ್ಯಕ್ತಿಗಳು ಪರಸ್ಪರ ಭಿನ್ನರಾಗಿರುವರು ಆದರೆ ಅವರು ಒಬ್ಬನೇ ಆದ ದೇವರಾಗಿದ್ದಾರೆ.

ಅಂತ್ಯಾಶೀರ್ವಾದವನ್ನು ಈ ಪ್ರಕರಣದಲ್ಲಿ ಅರ್ಥಮಾಡಿಕೊಳ್ಳಬೇಕು. ಇಲ್ಲಿ, ಒಬ್ಬನೇ ಆದ ದೇವರೂ, ಸರ್ವಶಕ್ತನಾದ ದೇವರೂ, ಪರಿಪೂರ್ಣನಾದ ದೇವರೂ ಮಾತಾಡುತ್ತಿರುವನು. ದೇವರ ಕಾರ್ಯಗಳು ಯಾವಾಗಲೂ ತಂದೆಯ, ಮಗನ, ಮತ್ತು ಪವಿತ್ರಾತ್ಮನ ಕಾರ್ಯಗಳಾಗಿವೆ. ಹೀಗಾಗಿ ಕೃಪೆ, ಪ್ರೀತಿ ಮತ್ತು ಅನ್ಯೋನ್ಯತೆಯು ಕ್ರಮವಾಗಿ ಪ್ರತಿಯೊಬ್ಬ ದೈವಿಕ ವ್ಯಕ್ತಿಗೆ ಸಂಬಂಧಿಸಿಲ್ಲ ಆದರೆ ಮೂವರಿಗೂ ಸಮಾನವಾಗಿ ಸಂಬಂಧಿಸಿರುವವು. ತಂದೆಯು ಕೃಪೆಯನ್ನು ಅನುಗ್ರಹಿಸುವನು, ಮಗನು ಅನ್ಯೋನ್ಯತೆಯನ್ನು ಅನುಗ್ರಹಿಸುವನು ಮತ್ತು ಪವಿತ್ರಾತ್ಮನು ಪ್ರೀತಿಯಾಗಿದ್ದಾನೆಂದು ಒಬ್ಬನು ಸರಳವಾಗಿ ಹೇಳಬಹುದು.

# ಆತ್ಮಿಕ ಭಾಗ
# ಡಿಎಎಮ್, ಅಕ್ರಾ ನವೆಂಬರ್ 2024

**ಯೇಸು ಕ್ರಿಸ್ತನ ಕೃಪೆ**

ಈ ಮಾತಿನ ಮೂಲಕ, ಯೇಸು ಕ್ರಿಸ್ತನಲ್ಲಿ ನಮಗೆ ಕೊಟ್ಟ ಕೃಪೆಯ ಕುರಿತು ದೇವರು ನಮ್ಮನ್ನು ಜ್ಞಾಪಿಸುತ್ತಾನೆ: ಆತನು ನಮ್ಮನ್ನು ಆರಿಸಿಕೊಂಡು ತನ್ನ ಮಕ್ಕಳಾಗಿಯೂ ತನ್ನ ಮಹಿಮೆಯ ವಾರಿಸುದಾರರನ್ನಾಗಿಯೂ ಮಾಡಿಕೊಂಡಿದ್ದಾನೆ (ಎಫೆಸ 1: 3–14). ಆತನು ನಮ್ಮ ಪಾಪಗಳನ್ನು ಕ್ಷಮಿಸಿದ್ದಾನೆ. ಮೇಲಾಗಿ, ನಮ್ಮಲ್ಲಿರುವುದೆಲ್ಲವೂ ಆತನ ಕೃಪೆಯಿಂದಲೇ ಹೊರತು ನಮ್ಮ ಯೋಗ್ಯತೆಯಿಂದಲ್ಲ.

ದೇವರು ತನ್ನ ಭೇಟಿಯನ್ನು ಈ ಆಶೀರ್ವಾದದ ಮೂಲಕ ಮುಕ್ತಾಯಗೊಳಿಸುವ ಮೂಲಕ, ಆತನು ಈ ಕೆಳಗಿನ ಸಂಗತಿಗಳ ಖಾತರಿ ನೀಡುತ್ತಾನೆ

- ಏನೇ ಆದರೂ ಸರಿ, ನಾವಾತನ ಮಕ್ಕಳಾಗಿ ಉಳಿದುಕೊಳ್ಳುತ್ತೇವೆ – ಆತನು ಎಂದಿಗೂ ನಮ್ಮ ನೇಮಕದ ಕುರಿತು ಸಂದೇಹಪಡುವುದಿಲ್ಲ;
- ದುಷ್ಟರ ಆರೋಪಗಳ ವಿರುದ್ಧ ನಮ್ಮ ಪರ ವಹಿಸಲು ನಾವು ಕ್ರಿಸ್ತನ ಮೇಲೆ ಭರವಸವಿಡಬಹುದು (ರೋಮಾ 8: 34);
- ನಾವಾತನ ಕೃಪೆಯಲ್ಲಿ ನಿರೀಕ್ಷಿಸಬಹುದು – ಆತನ ರಾಜ್ಯದಲ್ಲಿ ಪ್ರವೇಶಿಸಲು ಅಗತ್ಯವಾಗಿರುವ ಪರಿಪೂರ್ಣತೆಯನ್ನು ಹೊಂದಲು ಈ ಕೃಪೆಯು ಅವಕಾಶಿಸುವುದು (1 ಪೇತ್ರ 1: 13).

ಹೇಗೂ, ಈ ಖಾತರಿಯು ದೇವರನ್ನು ಮೆಚ್ಚಿಸುವಂಥ ನಡವಳಿಕೆಯನ್ನು ಅಳವಡಿಸಿಕೊಳ್ಳುವವರಿಗೆ ಮಾತ್ರ ಅನ್ವಯಿಸುತ್ತದೆ. ದೇವರು ನಮ್ಮನ್ನು ಈ ಕೆಳಗಿರುವ ಸಂಗತಿಗಳನ್ನು ಮಾಡಲು ಪ್ರೋತ್ಸಾಹಿಸುತ್ತಾನೆ

- ನಾವು ಸಂಪೂರ್ಣವಾಗಿ ದೇವರ ಕೃಪೆಯನ್ನು ಅವಲಂಬಿಸಿರುವ ಕಾರಣ ನಾವಾತನ ಹಾಗು ಇತರರ ಮುಂದೆ ದೀನರಾಗಿ ಉಳಿದುಕೊಳ್ಳಲು, ಏಕೆಂದರೆ ನಾವೆಲ್ಲರೂ ಪಾಪಿಗಳಾಗಿದ್ದೇವೆ;
- ಆತನ ಮಹಿಮೆಯನ್ನು ಪಡೆದುಕೊಳ್ಳಲು ಕರೆಯಲ್ಪಟ್ಟ ನಾವು ನಿಜವಾದ ದೇವರ ಮಕ್ಕಳಂತೆ ವರ್ತಿಸಲು;
- ನಾವಾತನಿಂದ ಹೊಂದಿರುವಂಥ ವರಗಳನ್ನು ಇತರರ ಸೇವೆ ಮಾಡುವುದರಲ್ಲಿ ಉಪಯೋಗಿಸಲು (1 ಪೇತ್ರ 4: 10).

**ದೇವರ ಪ್ರೀತಿ**

ನಾವು ಮಗನೆ ಹೋಗುವ ಮುಂಚೆ, ದೇವರು ಮತ್ತೊಮ್ಮೆ ನಮಗಾಗಿರುವ ತನ್ನ ಪ್ರೀತಿಯನ್ನು ಘೋಷಿಸುತ್ತಾನೆ. ಆತನು ಮಾಡುವ ಪ್ರತಿಯೊಂದು ವಿಷಯವೂ ನಮ್ಮನ್ನು ಆತನೊಂದಿಗೆ ಸದಾಕಾಲಕ್ಕೂ ಜೀವಿಸಲು ಸಮರ್ಥಗೊಳಿಸುವ ಉದ್ದೇಶ ಹೊಂದಿರುತ್ತದೆ. ನಮ್ಮ ರಕ್ಷಣೆಯನ್ನು ತಡೆಗಟ್ಟುವ ಪ್ರತಿಯೊಂದು ಅಡಚಣೆಯನ್ನು ನಮ್ಮ ಮಾರ್ಗದಿಂದ ಆತನು ತೆಗೆದುಹಾಕುವನು. ರಕ್ಷಣೆ ಹೊಂದಲು ಅಗತ್ಯವಾಗಿರುವುದನ್ನು ಆತನು ನಮಗೆ ಅನುಗ್ರಹಿಸುವನು.

ಇದಕ್ಕೆ ಪ್ರತಿಯಾಗಿ, ಎಲ್ಲಾ ಪರಿಸ್ಥಿತಿಗಳಲ್ಲೂ ನಾವಾತನ ಪ್ರೀತಿಯಲ್ಲಿ ಉಳಿದುಕೊಳ್ಳಬೇಕೆಂದು ಆತನು ನಮ್ಮಲ್ಲಿ ಕೇಳಿಕೊಳ್ಳುತ್ತಾನೆ. ಡಿವೈನ್ ಸರ್ವಿಸ್‌ನಿಂದ ಹೋಗುವಾಗ ನಾವು ಈ ಕೆಳಗಿರುವ ಸಂಗತಿಗಳೊಂದಿಗೆ ಹೋಗಬೇಕೆಂದು ದೇವರು ಬಯಸುತ್ತಾನೆ

- ಆತನ ಆಜ್ಞೆಗಳನ್ನು ಕೈಕೊಳ್ಳುವ ದೃಢಸಂಕಲ್ಪ;
- ಆತನನ್ನು ಪ್ರೀತಿಯಿಂದಲೇ ಹೊರತು ಲೆಕ್ಕ ಹಾಕದೆ ಸೇವೆ ಮಾಡುವ ದೃಢನಿಶ್ಚಯ;
- ನಮ್ಮ ಸಹ ಮಾನವರನ್ನು ದೇವರು ಪ್ರೀತಿಸುವಂತೆಯೇ ನಾವೂ ಪ್ರೀತಿಸುವ ಇಚ್ಛೆ.

ಪವಿತ್ರಾತ್ಮನ ಅನ್ಯೋನ್ಯತೆ

ಪವಿತ್ರಾತ್ಮನ ಮೂಲಕವೇ ನಾವು ದೇವರ ಸ್ವರವನ್ನು ಕೇಳುತ್ತೇವೆ ಮತ್ತು ಆತನ ಚಿತ್ತವನ್ನು ಅರಿತುಕೊಳ್ಳುತ್ತೇವೆ. ನಮ್ಮನ್ನು ಮಾರ್ಗದರ್ಶಿಸಲು, ಸಾಂತ್ವನ ನೀಡಲು, ಮತ್ತು ಬಲಪಡಿಸಲು ನಮ್ಮೊಂದಿಗೆ ಮಾತನಾಡುವುದನ್ನು ಮುಂದುವರಿಸುತ್ತೇನೆಂದು ದೇವರು ವಾಗ್ದಾನ ಮಾಡುತ್ತಿರುವನು. ಮತ್ತು ಪ್ರಸಂಗದಲ್ಲೂ ಹಾಗು ನಮ್ಮ ಮನಸಾಕ್ಷಿಯಲ್ಲೂ ಆತನು ನಮಗೆ ಹೇಳುವುದನ್ನು ನಾವು ಗಮನವಿಟ್ಟು ಕೇಳಬೇಕೆಂದು ಆತನು ನಮಗೆ ಸಲಹೆ ನೀಡುತ್ತಾನೆ.

# ಆತ್ಮಿಕ ಭಾಗ
# ಡಿಎಎಮ್, ಅಕ್ರಾ ನವೆಂಬರ್ 2024

ಕ್ರಿಸ್ತನ ಸ್ವಾಸ್ಥ್ಯದಲ್ಲಿ ಅನ್ಯೋನ್ಯವಾಗಿರುವುದು, ಆತನ ಶ್ರಮೆಗಳಲ್ಲಿ ಅನ್ಯೋನ್ಯವಾಗಿರುವುದರೊಂದಿಗೆ ಜೊತೆಗೂಡಿರುವುದು (ರೋಮಾ 8: 17; ಫಿಲಿಪ್ಪಿ 3: 10). ನಾವು ಇನ್ನು ಮುಂದೆಯೂ ಸಂಕಟವನ್ನು ಅನುಭವಿಸುವೆವೆಂದು ದೇವರು ನಮ್ಮನ್ನು ಎಚ್ಚರಿಸುತ್ತಾನೆ. ಆದರೆ ನಾವು ಯಾವುದಕ್ಕೂ ಹೆದರುವ ಅಗತ್ಯವಿಲ್ಲ. ಆತನು ನಮ್ಮೊಂದಿಗಿದ್ದಾನೆ. ಆತನು ನಮ್ಮ ಪ್ರಾರ್ಥನೆಯನ್ನು ಕೇಳುತ್ತಾನೆ ಮತ್ತು ಉತ್ತರಿಸುತ್ತಾನೆ. ಮತ್ತು ಒಂದು ವೇಳೆ ನಾವು ಪ್ರಾರ್ಥನೆ ಮಾಡಲು ಬಲಹೀನರಾಗೊಂಡಾಗ, ಪವಿತ್ರಾತ್ಮನು ನಮಗೋಸ್ಕರ ವಿಜ್ಞಾಪಿಸುತ್ತಾನೆ (ರೋಮಾ 8: 26–27).

ಪವಿತ್ರಾತ್ಮನ ಅನ್ಯೋನ್ಯತೆಯು ಪ್ರೀತಿಯ ಅನ್ಯೋನ್ಯತೆಯೂ ಆಗಿದೆ. ಪವಿತ್ರಾತ್ಮನು ನಮ್ಮ ಹೃದಯಗಳಲ್ಲಿ ಪ್ರೀತಿರಸವನ್ನು ಸುರಿಸಿದ್ದಾನೆ. ನಾವು ನಮ್ಮ ದೈನಂದಿನ ಜೀವಿತಗಳಿಗೆ ಹಿಂದಿರುಗುವಾಗ, ಇತರರು ಅವರಿರುವ ರೀತಿಯಲ್ಲೇ ಅವರನ್ನು ಪ್ರೀತಿಸಲು ದೇವರು ನಮ್ಮನ್ನು ಸಮರ್ಥರನ್ನಾಗಿ ಮಾಡಿದ್ದಾನೆಂದು ನಾವು ಜ್ಞಾಪಕದಲ್ಲಿಟ್ಟುಕೊಳ್ಳೋಣ – ಒಂದು ಷರತ್ತೇನೆಂದರೆ, ನಾವು ಇದನ್ನೇ ಬಯಸಬೇಕು, ಈ ವಿಷಯದಲ್ಲಿ ಕಾರ್ಯಮಾಡಬೇಕು, ಮತ್ತು ದೈವಿಕ ಸಹಾಯಕ್ಕಾಗಿ ದೇವರಲ್ಲಿ ಮೊರೆಯಿಡಬೇಕು.

ಅಂತ್ಯಾಶೀರ್ವಾದವು ಸಭೆಯಲ್ಲಿರುವ ಪವಿತ್ರಾತ್ಮನ ನಿರಂತರವಾದ ಉಪಸ್ಥಿತಿಯನ್ನೂ ದೃಢೀಕರಿಸುತ್ತದೆ. ನಾವು ಚಿಂತಿಸುವ ಯಾವ ಕಾರಣವೂ ಇಲ್ಲ: ಪವಿತ್ರಾತ್ಮನು ಮದಲಗಿತ್ತಿಯನ್ನು ಮದಲಿಂಗನೊಂದಿಗೆ ಪರಿಪೂರ್ಣವಾದ ಅನ್ಯೋನ್ಯತೆಯಲ್ಲಿ ಸೇರಿಸುವುದರಿಂದ ಯಾವುದೂ ಆತನನ್ನು ತಡೆಯಲಾರದು.

ಅಂತಿಮವಾಗಿ, ಆತ್ಮನ ಅನ್ಯೋನ್ಯತೆಯನ್ನು ಸಂತರ ಅನ್ಯೋನ್ಯತೆಯಿಂದ ಬೇರ್ಪಡಿಸಲಾಗದು. ನಾವೆಲ್ಲರು ಒಂದೇ ಆತ್ಮನನ್ನು, ಒಂದೇ ನಂಬಿಕೆಯನ್ನು ಮತ್ತು ಒಂದೇ ಭವಿಷ್ಯತ್ತನ್ನು ಹೊಂದಿರುತ್ತೇವೆ. ನಾವೆಲ್ಲರು ಒಂದೇ ವಾಕ್ಯವನ್ನು ಮತ್ತು ಒಂದೇ ರೊಟ್ಟಿಯನ್ನು ಹೊಂದುತ್ತೇವೆ. ನಾವು ಅಗಲುವುದಕ್ಕಿಂತ ಮುಂಚಿತವಾಗಿ, ನಾವೆಲ್ಲರು ಒಂದೇ ಶರೀರದ, ಅಂದರೆ, ಕ್ರಿಸ್ತನ ಶರೀರದ ಅಂಗಗಳಾಗಿದ್ದೇವೆಂಬುದನ್ನು ಮರೆಯಬಾರದೆಂದು ದೇವರು ನಮ್ಮನ್ನು ಎಚ್ಚರಿಸುತ್ತಾನೆ. ನಾವು ಪರಸ್ಪರ ಅನ್ಯೋನ್ಯವಾಗಿರುವ ಮೂಲಕ ಮಾತ್ರ ದೇವರೊಂದಿಗೆ ಅನ್ಯೋನ್ಯವಾಗಿರಬಹುದು (1 ಯೋಹಾನ 1: 3–7). ನಾವು ಯಾವಾಗಲೂ ಪರಸ್ಪರ ಭಿನ್ನವಾಗಿರುವೆವು. ಆದರೆ ನಾವು ನಮ್ಮ ಭಿನ್ನತೆಗಳಲ್ಲೇ ಬಂಧಿಗಳಾಗಿರುವುದನ್ನು ದೇವರು ಇಚ್ಛಿಸುವುದಿಲ್ಲ! ಇವುಗಳ ಮೇಲೆ ನಾವು ಜಯ ಗಳಿಸಬೇಕೆಂದೂ ಮತ್ತು ಸಭೆಯ ಐಕ್ಯತೆಗಾಗಿ ಸಕ್ರಿಯವಾಗಿ ಯೋಗದಾನ ನೀಡಬೇಕೆಂದೂ ಆತನು ನಮ್ಮಲ್ಲಿ ಕೇಳಿಕೊಳ್ಳುತ್ತಾನೆ. ಮತ್ತು ವಿಶ್ವಾಸಿಗಳ ಅನ್ಯೋನ್ಯತೆಯು ಬರೀ ಆತ್ಮಿಕವಾದದ್ದಲ್ಲವೆಂದೂ ಆತನು ನಮ್ಮನ್ನು ಜ್ಞಾಪಿಸುತ್ತಾನೆ. ಅಗತ್ಯವಿರುವ ಐಕ್ಯಮತ್ಯದಲ್ಲಿರುವ ಮೂಲಕವೂ ಮತ್ತು ಲೌಕಿಕ ವಸ್ತುಗಳನ್ನು ಹಂಚಿಕೊಳ್ಳುವ ಮೂಲಕವೂ ಇದು ಸ್ಪಷ್ಟ ರೀತಿಯಲ್ಲಿ ವ್ಯಕ್ತಪಡಿಸಲಾಗುವುದು (1 ಯೋಹಾನ 3: 17–18).

ಈ ಹಲವು ಆಲೋಚನೆಗಳು ಸಮಗ್ರತೆಯಿಂದ ದೂರವಾಗಿವೆ. ಅಪೊಸ್ತಲನಾದ ಪೌಲನ ಈ ಮಾತುಗಳನ್ನು ವೃದ್ಧಿಪಡಿಸಲು ಖಚಿತವಾಗಲೂ ಇನ್ನಿತರ ಮಾರ್ಗಗಳುಂಟು. ನಾನು ಸರಳವಾಗಿ, ಅಂತ್ಯಾಶೀರ್ವಾದದ ಪ್ರಾಮುಖ್ಯತೆಯನ್ನು ಪ್ರಸ್ತಾಪಿಸಲು ಮತ್ತು ವಿಶ್ವಾಸವಿಡುವ ಒಂದು ಹೃದಯದಲ್ಲಿ ಅದು ಉಂಟುಮಾಡುವ ಪರಿಣಾಮಗಳನ್ನು ತೋರಿಸಲು ಬಯಸಿದ್ದೆನು. ಒಂದು ಕಡೇ ಮಾತು: ಈ ಆಶೀರ್ವಾದವು, ಅದನ್ನು ಉಚ್ಚರಿಸುವವನಿಗೂ ಅನ್ವಯಿಸುತ್ತದೆ. ಪ್ರಿಯ ಅಪೊಸ್ತಲರೇ, ನೀವಿದನ್ನು ಅನುಭವಿಸುವಿರೆಂದು ನಾನು ಪ್ರಾಮಾಣಿಕವಾಗಿ ಭಾವಿಸುತ್ತೇವೆ!